ಶ್ರೀ ಹೆಚ್.ಡಿ. ದೇವೇಗೌಡರು (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮೈಸೂರು ನಗರದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗೆ ಸಂಬಂಧಿಸಿದ ೧೪ (ಹದಿನಾಲ್ಕು) ಕಚೇರಿಗಳಿವೆ.

ಆ) ೫ (ಐದು) ಕಚೇರಿಗಳಿಗೆ ಸ್ವಂತ ಕಟ್ಟಡಗಳಿದ್ದು, ೯ (ಒಂಬತ್ತು) ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿವೆ. ಬಾಡಿಗೆಗೆ ಪಡೆದಿರುವ ಕಟ್ಟಡಗಳಿಗೆ ತಿಂಗಳಿಗೆ ೧೦,೯೪೨-೦೦ ಹತ್ತು ಸಾವಿರದ ಒಂಭೈನೂರ ನಲವತ್ತೆರಡು) ರೂಪಾಯಿಗಳು ಬಾಡಿಗೆ ಕೊಡಲಾಗುತ್ತಿದೆ.

ಇ) ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕಚೇರಿಗಳಿಗಾಗಿ ಪ್ರತ್ಯೇಕವಾಗಿ ಒಂದು ಸಂಯೋಜಿತ (ಕಾಂಪ್ಲೆಕ್ಸ್) ಕಟ್ಟಡ ತಯಾರಿಸಲಾಗುತ್ತಿದೆ ಮತ್ತು ಅನುಕ್ರಮವಾಗಿ ಅಂದಾಜುಗಳು ೧೭೦ ಲಕ್ಷ ಹಾಗೂ ೨೧.೫ ಲಕ್ಷ ರೂ. ಗಳಾಗಿವೆ.

ಶ್ರೀ ಎಚ್. ಗಂಗಾಧರನ್.—ಲೋಕೋಪಯೋಗಿ ಇಲಾಖೆಗೆ ಅರಮನೆಗೆ ಸೇರಿದಂಥ ಕಟ್ಟಡ ಇದೆ. ಅದರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂಥ ಬೇರೆ ಬೇರೆ ಇಲಾಖೆಗಳಿವೆ. ಆದ್ದರಿಂದ ಅದನ್ನೆಲ್ಲಾ ತೆಗೆದು ಲೋಕೋಪಯೋಗಿ ಇಲಾಖೆಯ ಎಲ್ಲಾ ಕಚೇರಿಗಳೂ ಒಂದೇ ಕಟ್ಟಡದದ ಇರುವಂತೆ ಮಾಡುವುದಕ್ಕೆ ಸಾಧ್ಯವೆ ? ಮಿನಿ ವಿಧಾನಸೌಧದಂತೆ ಜಿಲ್ಲಾ ಕಚೇರಿಗಳನ್ನು ಕಟ್ಟುವ ಯೋಜನೆ ಇತ್ತು. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಚ್.ಡಿ. ದೇವೇಗೌಡ.—ಅರಮನೆಗೆ ಸಂಬಂಧಪಟ್ಟ ಕಟ್ಟಡವನ್ನು ನಾವು ತೆಗೆದುಕೊಂಡು ಅದರಲ್ಲಿ ಕೆಲವು ಕಚೇರಿಗಳನ್ನು ನಡೆಸುತ್ತಿದ್ದೇವೆ ಎಲ್ಲ ಕಚೇರಿಗಳನ್ನೂ ಒಂದೇ ಕಡೆ ತೆರೆಯುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತೇವೆ, ಮೈಸೂರಿಗೆ ಬಂದಿದ್ದಾಗಲೂ ತಾವು ಈ ಅಭಿಪ್ರಾಯವನ್ನು ಕೊಟ್ಟಿದ್ದೀರಿ. ಎರಡನೆಯದಾಗಿ ಜಿಲ್ಲಾ ಮಟ್ಟದಲ್ಲಿ ಮಿನಿ ವಿಧಾನಸೌಧವನ್ನು ಕಟ್ಟುವುದು ಸರ್ವ ಸಂಪನ್ಮೂಲವನ್ನು ಅವಲಂಭಿಸಿರುತ್ತದೆ. ಅದರ ಬಗ್ಗೆ ನಿಖರವಾಗಿ ಈಗ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೇ, ಡಿಸ್ಟ್ರಿಕ್ಟ್ ಆಫೀಸ್ ಬಿಲ್ಡಿಂಗ್ ಹಳೇ ಬಿಲ್ಡಿಂಗ್ ಆಗಿದೆ ಈಗ ಕೊಡುತ್ತಿರುವ ಬಾಡಿಗೆಯು ಹತ್ತು ವರ್ಷದಷ್ಟು ಬಾಡಿಗೆ ಹಣದಲ್ಲಿ ಬೇರೆ ಒಂದು ವ್ಯವಸ್ಥೆ ಮಾಡಬಹುದಾಗಿದೆ, ಈ ಬಗ್ಗೆ ಎಸ್ಟಿಮೇಟ್ ಕೂಡ ಆಗಿತ್ತು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾವು ನಮ್ಮ ಸಂಪನ್ಮೂಲಗಳನ್ನು ಅವಲಂಭಿಸಿ ಕೆಲಸ ಮಾಡಬೇಕಾಗುತ್ತದೆ. ಈಗಾಗಲೇ ಅರಣ್ಯ ಇಲಾಖೆ ಹಾಗೂ ನ್ಯಾಯಾಲಯದ ಬಗ್ಗೆ ೮೦ ಲಕ್ಷ ರೂಪಾಯಿಗಳಿಗೆ ಆಡಳಿತದ ಮಂಜೂರಾತಿ ಕೊಡಲಾಗಿದೆ. ಜಿಲ್ಲಾ ಕಾಂಪ್ಲೆಕ್ಸ್ ಬಿಲ್ಡಿಂಗ್‌ಗೆ ೧೭೦ ಲಕ್ಷ ರೂಪಾಯಿಗಳು ಆಗುತ್ತದೆ. ಈ ಬಗ್ಗೆ ಸರ್ಕಾರ ಹಣ ಒದಗಿಸಿಲ್ಲ.

ಶ್ರೀ ಕೆಂಪೇಗೌಡ.—ಮೈಸೂರಿನಲ್ಲಿ ವಿಶ್ವಕನ್ನಡ ಸಮ್ಮೇಳನಕ್ಕಾಗಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಇಲ್ಲಿ ಸುಮಾರು ೭-೮ ದೊಡ್ಡ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ಮುಗಿದ ಮೇಲೆ ಅವನ್ನು ಈ ಬಾಬಿಗೆ ಉಪಯೋಗಿಸಿಕೊಳ್ಳುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ವಿಶ್ವ ಕನ್ನಡ ಸಮ್ಮೇಳನವನ್ನು ಬಹಳ ಸರಳವಾಗಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಪರಿಶೀಲನೆ ಮಾಡಲಾಗುವುದು.

ಕೃಷ್ಣ ಮೇಲ್ದಂಡೆ ಯೋಜನೆ ಕಾಲುವೆ ವಲಯಕ್ಕೆ ೧೯೮೨-೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಕೊಟ್ಟ ಹಣ.

೧೦೪ ಶ್ರೀ ಬಾಪುಗೌಡ ದರ್ಶನಾಪುರ (ಶಹಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.

(ಅ) ೧೯೮೨-೮೩ನೇ ಸಾಲಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಕಾಲುವೆ ವಲಯಕ್ಕೆ ಕೊಡ ಮಾಡಿದ ಹಣ.

(ಆ) ಕಾಲುವೆಗಳು ಹಾಗೂ ಉಪ ಕಾಲುವೆಗಳಿಗಾಗಿ ೧೯೮೨-೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಕೊಟ್ಟ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳು ವೆಚ್ಚ ಮಾಡಿಲ್ಲ ನಿಜವೇ.

(ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು.

(ಈ) ಕಳೆದ ಒಂದು ವರ್ಷದಿಂದ ಮುಖ್ಯ ಕಾಲುವೆ ಮತ್ತು ಶಹಾಪುರ ಬ್ರಾಂಚ್ ಕಾಲುವೆಗಳ ನಿರ್ಮಾಣ ಕೆಲಸವು ಕುಂಠಿತಗೊಂಡಿರುವುದು ಮತ್ತು ಬಹುಶಃ ತಟಸ್ಥಗೊಂಡಿರುವುದು ವಾಸ್ತವವಲ್ಲವೇ?

(ಉ) ಹಾಗಿದ್ದರೆ, ಕುಂಠಿತ ಪ್ರಗತಿಗೆ ಕಾರಣಗಳು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ೧೯೮೨-೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಕಾಲುವೆ ವಲಯಕ್ಕೆ ರೂ. ೩೫.೮೮ ಕೋಟಿ ಕೊಡ ಮಾಡಿತ್ತು. ತದನಂತರ ೨ ವೃತ್ತಗಳನ್ನು ಸಂಬಂಧಿಸಿದ ಕಾಮಗಾರಿಗಳ ಸಮೇತ ಅಣೆಕಟ್ಟು ವಲಯಕ್ಕೆ ವರ್ಗಾಯಿಸಿದ್ದರಿಂದ ಕಾಲುವೆ ವಲಯದ ಬಡ್ಜೆಟ್ ರೂ. ೨೯.೧೯ ಕೋಟಿಗೆ ಇಳಿಯಿತು

(ಆ) ೧೯೮೨-೮೩ನೇ ಸಾಲಿನಲ್ಲಿ ಜನವರಿ ೧೯೮೩ರ ಕೊನೆಯವರೆಗೆ ಕಾಲುವೆ ವಲಯದಲ್ಲಿ ಖರ್ಚಾದ ಹಣ ರೂ. ೧೧.೪೪ ಕೋಟಿ.

(ಇ) ಪೂರ್ತಿ ಹಣವನ್ನು ವೆಚ್ಚ ಮಾಡದಿರುವುದಕ್ಕೆ ಕಾರಣಗಳು ಈ ರೀತಿ ಇವೆ.

೧. ಫೆಬ್ರುವರಿ ಮತ್ತು ಮಾರ್ಚಿ ೧೯೮೩ ತಿಂಗಳುಗಳ ವೆಚ್ಚವನ್ನು ಇನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

೨. ಭೂ ಸ್ವಾಧೀನದಲ್ಲಿ ಆದ ವಿಳಂಬ

೩. ಗುತ್ತಿಗೆದಾರರು ತಮ್ಮ ತಕರಾರುಗಳನ್ನು ನ್ಯಾಯಾಲಯ ಮತ್ತು ಪಂಚಾಯ್ತಿಗೆ ಒಪ್ಪಿಸಿ ಕೆಲಸಗಳನ್ನು ನಿಧಾನ ಮಾಡಿದ್ದು ಇಲ್ಲವೇ ಸ್ಥಗಿತಗೊಳಿಸಿದ್ದು, ಮತ್ತು

೪. ಸಿಬ್ಬಂದಿ ವರ್ಗದ ನೇಮಕದಲ್ಲಿ ವಿಳಂಬ.

(ಈ) ಅಲ್ಲ. ಮುಖ್ಯ ಕಾಲುವೆ ಮತ್ತು ಶಹಾಪುರ ಬ್ರಾಂಚ್ ಕಾಲುವೆಗಳ ನಿರ್ಮಾಣ ಕಾರ್ಯವು ಕುಂಠಿತವಾಗಿರುವುದು ವಾಸ್ತವ.

(ಉ) ಮೇಲೆ 'ಇ'ನಲ್ಲಿ ಹೇಳಿದಂತೆ.

ಶ್ರೀ ಬಾಪುಗೌಡ ದರ್ಶನಪುರ.—ಅಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ೧೯೮೩ರಲ್ಲಿಯೇ ನೀರು ಬರಬೇಕಾಗಿತ್ತು. ಹಿಂದೆ ಇದ್ದ ಸರ್ಕಾರ ಸುಮಾರು ೩೫ ಸಾವಿರ ಎಕರೆಗೆ ನೀರು ಕೊಡುತ್ತೇವೆಂದು ಹೇಳಿದ್ದು ಮಾನ್ಯ ದೇವೇಗೌಡರಿಗೂ ಗೊತ್ತು. ೧೯೮೨-೮೩ಕ್ಕೆ ಕಾಲುವೆ ಮೇಲೆ ಖರ್ಚು ಆಗಬೇಕಾದ ೩೫ ಕೋಟಿ ರೂಪಾಯಿ ಬಡ್ಜೆಟ್ಟಿನಲ್ಲಿ ಸೇರ್ಪಡೆಯಾಗಿದೆ. ಆದರೆ ಅಲ್ಲಿ ಕೇವಲ ೧೧.೪೪ ಕೋಟಿ ರೂಪಾಯಿಗಳು ಮಾತ್ರ ಖರ್ಚು ಆಗಿದೆ. ಇದಕ್ಕೆ ಕಾರಣ ಏನು ? ೩೫.೮೮ ಕೋಟಿ ರೂಪಾಯಿ ಒದಗಿಸಿದ್ದರೂ ಕೂಡಾ ಕೇವಲ ೧೧.೪೪ ಕೋಟಿ ಖರ್ಚು ಮಾಡಿರುವುದಕ್ಕೆ ಕಾರಣ ಏನು ?

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಕಾರಣವನ್ನು ಹೇಳಿದ್ದೇನೆ. ಮೊದಲು ಕಾಲುವೆ ನಿರ್ಮಾಣದ ಬಗ್ಗೆ ಕೊಟ್ಟ ಹಣದಲ್ಲಿ ಸ್ವಲ್ಪ ಭಾಗವನ್ನು ಅಣೆಕಟ್ಟು ವಿಭಾಗಕ್ಕೆ ವರ್ಗಾಯಿಸಿದ್ದೇವೆ. ಈ ಪರಿಣಾಮವಾಗಿ ೬ ಕೋಟಿ ರೂಪಾಯಿ ಅಣೆಕಟ್ಟು ವಲಯಕ್ಕೆ ವರ್ಗಾವಣೆಯಾಗಿದೆ. ಹಾಗೂ ೧೧.೪೪ ಕೋಟಿ ರೂಪಾಯಿ ಏನು ಖರ್ಚು ಆಗಿದೆ ಅದು ಕಳೆದ ಏಪ್ರಿಲ್‌ನಿಂದ ಈ ಜನವರಿಯವರೆಗೆ ಖರ್ಚು

ಆಗಿರತಕ್ಕದ್ದು. ಹಾಗೂ ಫೆಬ್ರವರಿ ಹಾಗೂ ಮಾರ್ಚಿ ತಿಂಗಳಲ್ಲಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೊಟ್ಟ ಹಣವನ್ನು ಪೂರ್ತಿ ಖರ್ಚು ಮಾಡುವುದಕ್ಕೆ ಆಗಿಲ್ಲ ೧೦ ತಿಂಗಳಲ್ಲಿ ಈಗಾಗಲೇ ೧೧ ಕೋಟಿ ರೂಪಾಯಿ ಖರ್ಚು ಆಗಿದ್ದು ಫೆಬ್ರವರಿ ಹಾಗೂ ಮಾರ್ಚಿ ತಿಂಗಳಲ್ಲಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪೋಸ್ಟ್ ಮಾಡಿದ ಅಧಿಕಾರಿಗಳು ಕೂಡಾ ಅಲ್ಲಿಗೆ ಹೋಗುವುದಿಲ್ಲ. ಅಲ್ಲಿ ದೋಷ ಏನಿದೆಯೋ ಅದನ್ನು ಮಾನ್ಯ ಸದಸ್ಯರೇ ತಿಳಿಸಬೇಕಾಗುತ್ತದೆ. ಅಲ್ಲಿಗೆ ಯಾರನ್ನೇ ಪೋಸ್ಟ್ ಮಾಡಿದರೂ ಒಂದಲ್ಲಾ ಒಂದು ಕಾರಣ ಕೊಟ್ಟು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಇಲಾಖೆಯಲ್ಲಿ ಖಾಲಿ ಇರತಕ್ಕ ಹುದ್ದೆಗಳಿಗೆ ಭರ್ತಿ ಮಾಡಬೇಕೆಂದು ಹೇಳಿ ಅಸಿಸ್ಟೆಂಟ್ ಎಂಜಿನಿಯರ್ಸ್‌ಗೆ, ಎಕ್ಸಿಕ್ಯೂಟಿವ್ ಎಂಜಿನಿಯರ್ಸ್‌ಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ಸ್‌ಗೆ ಬಡ್ತಿಯನ್ನೂ ಕೊಟ್ಟೆವು. ೪ ಜನ ಎಕ್ಸಿಕ್ಯೂಟಿವ್ ಎಂಜಿನಿಯರ್ಸ್ ಹೋಗಿ ರಿಪೋರ್ಟ್ ಮಾಡಿಕೊಂಡಿಲ್ಲ. ೪೧ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ಸ್ ಅಲ್ಲಿಗೆ ಪೋಸ್ಟ್ ಮಾಡಿದ್ದು ಅವರು ಹೋಗಲೇ ಇಲ್ಲ. ೧೭೭ ಜನ ಅಸಿಸ್ಟೆಂಟ್ ಎಂಜಿನಿಯರ್ಸ್ ರಿಪೋರ್ಟ್ ಮಾಡಿಕೊಂಡಿಲ್ಲ. ಅವರು ಒಂದಲ್ಲಾ ಒಂದು ತೊಂದರೆಯನ್ನು ಹೇಳುತ್ತಿದ್ದಾರೆ. ಅಲ್ಲಿ ಹೋದ ಅಧಿಕಾರಿಗಳಿಗೆ ಮನೆಗಳಿಲ್ಲ, ಹಲವಾರು ತೊಂದರೆಗಳಿವೆ, ಅದನ್ನು ಸರಿಪಡಿಸಿದರೆ ನಾವು ಹೋಗುತ್ತೇವೆಂದು ಕೆಲವು ಅಧಿಕಾರಿಗಳು ಹೇಳುತ್ತಾರೆ. ಸರ್ಕಾರ ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಅಧಿಕಾರಿಗಳಿಗೆ ಸಲಹೆ ಕೊಟ್ಟಿದ್ದೇವೆ. ಅಲ್ಲಿ ಹಣ ಪೂರ್ತಿ ಉಳಿದಿದೆಯೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಆ ಬಗ್ಗೆ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಅಲ್ಲಿ ಕಂಟ್ರಾಕ್ಟರ್ಸ್ ಕೆಲವರು ಆರ್ಬಿಟ್ರೇಷನ್‌ಗೆ ಹೋಗಿರುವುದರ ಪರಿಣಾಮವಾಗಿ ಮಾಡಿರುವ ಕೆಲಸಕ್ಕೆ ಹಣವನ್ನು ಬಟವಾಡೆ ಮಾಡುವುದಕ್ಕೆ ಆಗಿಲ್ಲ. ಅದನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಸೇವಿಂಗ್ಸ್ ಆಗುತ್ತದೆ ಎನ್ನುವ ಭಾವನೆಗೆ ಮಾನ್ಯ ಸದಸ್ಯರು ಬರಬೇಕಾಗಿಲ್ಲ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನಮ್ಮ ಕ್ಷೇತ್ರಕ್ಕೂ ನೀರು ಬರುತ್ತವೆ. ಅಲ್ಲಿ ಈಗಾಗಲೇ ೩೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಕೂಡಾ ೧೮ ಕೋಟಿ ರೂಪಾಯಿಗಳು ಖರ್ಚು ಆಗಿವೆ. ಹಾಗೂ ೨ ತಿಂಗಳಲ್ಲಿ ೭ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದನ್ನು ಯಾವ ರೀತಿ ಖರ್ಚು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಇದು ವಿಶ್ವಬ್ಯಾಂಕಿನ ನೆರವು ಪಡೆದು ನಡೆಯುತ್ತಿರುವ ಯೋಜನೆ. ಇಲ್ಲಿ ಹಣ ಖರ್ಚು ಆಗಿಲ್ಲ. ಆ ಬಗ್ಗೆ ಏನು ತೊಂದರೆ ಇದೆ ಎಂಬುದನ್ನೂ ಹೇಳಿದ್ದೀರಿ. ಈ ಯೋಜನೆಗೆ ವಿಶ್ವಬ್ಯಾಂಕಿನವರು ಸಾಲ ಕೊಡುತ್ತಾರೆ. ಈ ಪ್ರಾಜೆಕ್ಟ್ ಒಂದು ನಿರ್ದಿಷ್ಟ ಸಮಯದಲ್ಲಿ ಆಗಬೇಕೆಂದು ಅವರ ಕರಾರು ಇರುತ್ತದೆ. ಆದ್ದರಿಂದ ಇದನ್ನು ತ್ವರಿತಗತಿಯಲ್ಲಿ ಮುಗಿಸುವುದಕ್ಕೆ ಪ್ರಯತ್ನಪಡುತ್ತಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇದಕ್ಕೆ ವಿಶ್ವಬ್ಯಾಂಕಿನಿಂದ ಹಣ ಬರುತ್ತದೆ. ಆದರೆ ನಾವು ಈ ಬಗ್ಗೆ ಹಣ ಖರ್ಚು ಮಾಡಿ ಆಮೇಲೆ ವಿಶ್ವಬ್ಯಾಂಕಿನವರಿಂದ ಆ ಹಣವನ್ನು ರೀಇಂಬರ್ಸ್‌ಮೆಂಟ್ ಮಾಡಿಕೊಳ್ಳಬೇಕು. ಕೆಲವು ಭಾಗದ ಹಣದ ಬಗ್ಗೆ ಈಗಾಗಲೇ ನಾವು ಕ್ಲೈಮ್ ಮಾಡಿದ್ದೇವೆ. ಆ ಹಣ ಇನ್ನೂ ಬಂದಿರುವುದಿಲ್ಲ. ಇದು ಅತ್ಯಂತ ಮಹತ್ವದ ಯೋಜನೆ ಇದೆ. ಇದರ ನೀರನ್ನು ಆದಷ್ಟು ಬೇಗ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಕಳೆದ ಸಾರಿ ೫೩.೭೮ ಕೋಟಿ ರೂಪಾಯಿಗಳನ್ನು ಅಣೆಕಟ್ಟು ಹಾಗೂ ಕಾಲುವೆ ವಿಭಾಗಕ್ಕೆ ಕೊಡಲಾಗಿತ್ತು. ಇದರಲ್ಲಿ ನಾನು ಮೊದಲೇ ಹೇಳಿದ ಹಾಗೆ ಒಟ್ಟು ಖರ್ಚು ಆಗಿರತಕ್ಕ ಹಣ ೨೬.೯ ಕೋಟಿ ರೂಪಾಯಿಗಳು. ಏನು ಸುಮಾರು ೧೨ ಕೋಟಿ ರೂಪಾಯಿ ಹಣ ಖರ್ಚಾಗದೇ ಉಳಿದಿದೆ ಆ ಬಗ್ಗೆ ಹೇಳಬೇಕೆಂದರೆ ಸುಮಾರು ೨೦ ಕಂಟ್ರಾಕ್ಟರ್ಸ್ ಆರ್ಬಿಟ್ರೇಷನ್ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ಇನ್ನೂ ಪೇಮೆಂಟ್ ಮಾಡಲಾಗಿಲ್ಲ. ಈ ಲೆಕ್ಕವನ್ನೂ ನಾವು ಗಣನೆಗೆ ತೆಗೆದುಕೊಂಡರೆ ಉಳಿದಿರುವ ಸುಮಾರು ೧೨ ಕೋಟಿ ಹಣವೆಲ್ಲಾ ಖರ್ಚಾಗದೇ ಉಳಿದಿರುವುದೆಂದು ಹೇಳುವುದಕ್ಕೆ ಬರುವುದಿಲ್ಲ. ಹಾಗೂ ಇಲ್ಲಿನ ಪೂರ್ಣ ಪ್ರೋಗ್ರೆಸ್ ಎಷ್ಟು ಎಂದು ಹೇಳುವುದಕ್ಕೂ ಕಷ್ಟ ಇದೆ. ನಾನು ಮೊದಲೇ ಹೇಳಿದ ಹಾಗೆ ಇಲ್ಲಿ ಸಿಬ್ಬಂದಿ ಬಂದು ನೆಲೆಸಲು ಏನೇನು ಸೌಕರ್ಯಗಳನ್ನು ಒದಗಿಸಬೇಕೋ ಆ ಬಗ್ಗೆ ಸರ್ಕಾರ ಜರೂರು ಕ್ರಮ ಕೈಗೊಳ್ಳುತ್ತದೆ. ವರ್ಗಾವಣೆ ವಿಷಯದಲ್ಲಿ ಕೆಲವು ಜನ್ಯುಯನ್ ಕೇಸ್‌ಗಳಿದ್ದು ಅವನ್ನು ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ. ಇನ್ನು ಒಂದೇ ಒಂದು ಮಾತನ್ನು ಹೇಳುತ್ತೇನೆ.

ಏನೆಂದರೆ ಅತ್ಯಂತ ಶೀಘ್ರವಾಗಿ ಅಲ್ಲಿರತಕ್ಕ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ತ್ವರಿತವಾದ ಕ್ರಮ ಕೈಗೊಳ್ಳುತ್ತದೆ ಎಂದು.

೧೨-೩೦ ಪಿ.ಎಂ.

ಶ್ರೀ ಬಾಪುಗೌಡ ದರ್ಶನಪುರ.—ಯೋಜನೆಯ ಗಾತ್ರದ ಪ್ರಕಾರ ಕೆಲಸ ಮಾಡಬೇಕಾದರೆ ಸಿಬ್ಬಂದಿ ಸಾಲದು ಎಂದು ಹೇಳಿದ್ದೀರಿ. ತಾವು ಒದಗಿಸಿಕೊಟ್ಟ ೩೫-೪೦ ಕೋಟಿ ರೂಪಾಯಿಗಳು ಸಾಲದು. ಲೋಕೋಪಯೋಗಿ ಇಲಾಖೆ ದಾಮಾಷಾ ಪ್ರಕಾರ ಕಾರ್ಯಭಾರಕ್ಕೆ ಸಮಾನವಾಗಿ ಸಿಬ್ಬಂದಿಯನ್ನು ಕೊಡಬೇಕಾಗುತ್ತದೆ. ಜೊತೆಗೆ ಹಣ ಕೂಡ ಜಾಸ್ತಿ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಬಾಪುಗೌಡರು ಹೇಳಿದಂಥ ವಿಚಾರಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಸರಿಯಾದ ಮಾಹಿತಿ ಇಲ್ಲದೇ ಹೇಳುವುದಕ್ಕಾಗುವುದಿಲ್ಲ. ಡಿವಿಜನ್ ವರ್ಕ್‌ಲೋಡ್, ಸಬ್ ಡಿವಿಜನ್ ವರ್ಕ್‌ಲೋಡ್ ಎಷ್ಟಿದೆ ಎಂಬುದನ್ನು ವರದಿ ತರಿಸಿಕೊಂಡು ನಾವು ಹೇಳಬೇಕಾಗುತ್ತದೆ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಸುಮಾರು ೧೦-೧೨ ಜನ ಕಂಟ್ರಾಕ್ಟ್‌ದಾರರು ಆರ್ಬಿಟ್ರೇಷನ್‌ಗೆ ಹೋಗಿದ್ದಾರೆ. ಇದರ ಬಗ್ಗೆ ಜಡ್ಜ್‌ಮೆಂಟ್ ಬಂದು ಡಿಸಿಷನ್ ಆಗಿ ತೀರ್ಮಾನ ವಾಗುವವರೆಗೂ ಪುನಃ ಕೆಲಸ ಮಾಡುವುದಕ್ಕಾಗುವುದಿಲ್ಲ. ತಾವು ಒದಗಿಸಿದಂಥ ೩೫ ಕೋಟಿ ರೂಪಾಯಿಗಳಲ್ಲಿ ಕೇವಲ ೧೮ ಕೋಟಿ ಮಾತ್ರ ಖರ್ಚಾಗಿದೆ. ಉಳಿಕೆ ಹಣ ಲ್ಯಾಪ್ಸ್ ಆಗತಕ್ಕಂಥ ಪರಿಸ್ಥಿತಿಗೆ ಬಂದಿದೆ. ೧೯೮೩-೮೪ರಲ್ಲಿ ಏನು ಹಣ ಒದಗಿಸಿದ್ದೀರಿ ? ಮತ್ತು ಆರ್ಬಿಟ್ರೇಷನ್‌ಗೆ ಹೋದವರಿಗೂ ಕೂಡ ಕೆಲಸ ಮಾಡಲಿಕ್ಕೆ ಅವಕಾಶ ಒದಗಿಸಿಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಆರ್ಬಿಟ್ರೇಷನ್ ಕ್ಲಾಸ್ ಇಟ್ಟುಕೊಂಡಿರುವುದು ಇದನ್ನು ನಾವು ಸರಿಯೋ ತಪ್ಪೋ ಎಂದು ಹೇಳುವುದಕ್ಕೆ ಬರುವುದಿಲ್ಲ. ವಿಶ್ವಬ್ಯಾಂಕ್ ಜೊತೆಗೆ ಒಪ್ಪಂದ ಮಾಡಿಕೊಂಡ ನಂತರ ಆರ್ಬಿಟ್ರೇಷನ್ ಕ್ಲಾಸ್ ಸೇರಿಸಿದ್ದಾರೆಂದು ನಾನು ಭಾವಿಸುತ್ತೇನೆ. ಈಗ ಮೂರು ಕೇಸುಗಳಲ್ಲಿ ಅವಾರ್ಡ್ ಪಾಸಾಗಿದೆ, ಈ ವಿಚಾರದಲ್ಲಿ ಅಪೀಲು ಹೋದರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆಯೋ ಎನ್ನುವ ಬಗ್ಗೆ ಕಾನೂನು ಇಲಾಖೆಯೊಂದಿಗೆ ವ್ಯವಹಾರ ಮಾಡುತ್ತಿದ್ದೇವೆ. ಇವರಿಗೆ ಪೇಮೆಂಟ್ ಮಾಡುವುದಕ್ಕೂ ಕೂಡ ಸಾಧ್ಯವಾಗಿಲ್ಲ. ಇರತಕ್ಕ ತೊಡಕುಗಳನ್ನು ವಿಳಂಬ ಇಲ್ಲದೇ ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಪುಗೌಡ ದರ್ಶನಾಪುರ.—ಸ್ವಾಮಿ, ಕೃಷ್ಣ ಮೇಲ್ದಂಡೆ ಯೋಜನೆ ಬಹಳ ದೊಡ್ಡ ಯೋಜನೆ, ಸುಮಾರು ೨೧ ಲಕ್ಷ ಎಕರೆ ನೀರಾವರಿಯಾಗತಕ್ಕಂಥ ಯೋಜನೆ. ಇದನ್ನು ಎರಡು ಹಂತ ದಲ್ಲಿ ತೆಗೆದುಕೊಂಡಿದ್ದಾರೆ. ಈ ಯೋಜನೆಗೆ ವಿಶ್ವಬ್ಯಾಂಕಿನಿಂದ ಸಹಾಯ ಕೂಡ ದೊರೆಯುತ್ತಿದೆ. ೧೯೮೩ನೇ ಇಸವಿಗೆ ಈ ಯೋಜನೆಯಿಂದ ನೀರನ್ನು ಹರಿಸಬೇಕಾಗಿತ್ತು. ಅಲ್ಲಿ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ, ಮುನ್ನೂರು ಎಕರೆಗೂ ಕೂಡ ನೀರು ಹರಿಸುವುದಕ್ಕಾಗುವುದಿಲ್ಲ. ವಿಶ್ವಬ್ಯಾಂಕಿನವರು ಕೊಟ್ಟಂಥ ೧೦೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಶಕ್ತಿ ಸರ್ಕಾರಕ್ಕೆ ಇಲ್ಲದೇ ಹೋದರೆ, ೧೦೦೦ ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿನಿಂದ ಪಡೆಯುವುದಕ್ಕೆ ಸಾಧ್ಯವಾಗು ತ್ತದೆಯೆ ? ತಾವು ಸತತ ಪ್ರಯತ್ನ ಮಾಡಿ ೧೯೮೩-೮೪ ರೊಳಗೆ ನೀರನ್ನು ಕೊಡತಕ್ಕಂಥ ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ,—ಕರ್ನಾಟಕ ರಾಜ್ಯದಲ್ಲಿ ಇದು ಮಹತ್ತರವಾದ ಯೋಜನೆ ಎಂಬದನ್ನು ನಾವು ಮನಗಂಡಿದ್ದೇವೆ. ಆಗ ಸುಮಾರು ೩೦೦ ಕೋಟಿರೂಪಾಯಿಗಳ ಅಂದಾಜು ಮಾಡಲಾಗಿತ್ತು ಇವತ್ತು ಅಂದಾಜು ಜಾಸ್ತಿಯಾಗಿದೆ. ಇದಕ್ಕೆ ವಿಶ್ವಬ್ಯಾಂಕ್ ಕೂಡ ಸಹಾಯ ಕೊಡುತ್ತಿದೆ. ಸರ್ಕಾರ ತೀವ್ರತೆಯಿಂದ, ಕಾಳಜಿ ವಹಿಸಿ ಕೆಲಸ ಮಾಡುವುದಕ್ಕೆ ಸಿದ್ಧವಿದೆ. ಆ ಭಾಗದ ಶಾಸಕರನ್ನು. ವಿರೋಧಪಕ್ಷದ ನಾಯಕರನ್ನು, ಮಾನ್ಯ ಬಂಗಾರಪ್ಪನವರನ್ನು ಕರಸಿ ವಿಚಾರ ಇದರ ಬಗ್ಗೆ ವಿಚಾರ ಮಾಡುತ್ತೇನೆ. ಇದರಲ್ಲಿ ನಾವು ಮುಚ್ಚಿಡಬೇಕಾದ್ದು ಏನೂ ಇಲ್ಲ. ಆರ್ಬಿಟ್ರೇಷನ್ ಕ್ಲಾಸ್ ಕಿತ್ತು ಹಾಕುವುದಕ್ಕೆ ಸಾಧ್ಯವೆ ಎಂಬುದರ ಬಗ್ಗೆ ತಮ್ಮನ್ನು ಕರೆದು ವಿಚಾರ ಮಾಡುತ್ತೇನೆ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಈಗ ೪೦ ಪರ್ಸೆಂಟ್ ಪೋಸ್ಟಿಂಗ್ಸ್ ಏನು ಮಾಡಿದ್ದೀರಿ. ಅವರಿಗೆ ಕೆಲಸ ಇಲ್ಲ. ಅವರೇ ಕೆಲಸ ಇಲ್ಲದೇ ಕುಳಿತಿದ್ದಾರೆ. ಮಿನಿಸ್ಟೀರಿಯಲ್ ಸಿಬ್ಬಂದಿ ಪೈಕಿ ಡ್ರೈವರ್ಸ್ ಇಲ್ಲ. ವಾಚ್ ಮನ್‌ಗಳು ಇಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಚಿಮ್ಮನಕಟ್ಟಿಯವರು ಈ ಇಲಾಖೆಯನ್ನು ನಿರ್ವಹಣೆ ಮಾಡಿದ್ದಾರೆ. ಹೊಸ ಸಿಬ್ಬಂದಿಯನ್ನು ಮಂಜೂರು ಮಾಡಿಲ್ಲ. ಹಿಂದೆ ಡಿವಿಜನ್ ಸಬ್ ಡಿವಿಜನ್ ಎಂದು ಮಂಜೂರು ಮಾಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಇಂತಹಕ್ಕಂಥ ಅಧಿಕಾರಿಗಳ ಸಂಖ್ಯೆಯನ್ನು ಹೇಳಿದೆ. ಈಗ ಆಗಿರುವಂಥ ಕೆಲಸಗಳಿಗೆ ಪೇಮೆಂಟ್ ಮಾಡಿದರೆ ಹಣ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರ್ಬಿಟ್ರೇಷನ್‌ನಲ್ಲಿ ವಿಶ್ವಬ್ಯಾಂಕ್ ನಾಮಿನಿ ಇರುತ್ತಾರೆ. ಕಂಟ್ರಾಕ್ಟರ್ ನಾಮಿನಿ ಇರುತ್ತಾರೆ. ಸರ್ಕಾರದ ನಾಮಿನಿ ಇರುತ್ತಾರೆ, ಈ ಮೂರು ಜನ ಸೇರಿ ನಿರ್ಣಯ ಕೊಟ್ಟಮೇಲೂ ಕೂಡ ಡಿಲೆ ಏತಕ್ಕೆ ? ಈ ರೀತಿಯಾದರೆ ಈ ಪ್ರಾಜೆಕ್ಟ್ ಮುಗಿಯುವುದು ಯಾವಾಗ ?

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿ ಅರ್ಬಿಟ್ರೇಷನ್ ಮೇಲೆ ದೊಡ್ಡ ಚರ್ಚೆಯಾಗಿದೆ. ಇದು ಬಹಳ ಮಹತ್ವದ ವಿಷಯ ಎನ್ನುವುದು ಸರ್ಕಾರದವರಿಗೆ ತಿಳಿದಿದೆ. ಅರ್ಬಿಟ್ರೇಷನ್ ವಿಷಯದಲ್ಲಿ ವಿಧಿನಿಯಮಗಳಿಗೆ ಅನುಸಾರವಾಗಿ ವಿಳಂಬ ಮಾಡದೇ ಆ ಭಾಗದ ಎಲ್ಲಾ ಶಾಸಕರನ್ನು ಕರೆಸಿ ವಿಚಾರ ಮಾಡುತ್ತೇನೆ.

ಕೇರಳ ರಾಜ್ಯಕ್ಕೆ ಸಿಮೆಂಟ್ ಪೂರೈಕೆ ಬಗ್ಗೆ

೧೦೫. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕೇರಳ ರಾಜ್ಯಕ್ಕೆ ಸಿಮೆಂಟ್ ಸರಬರಾಜು ಮಾಡಲು ರಾಜ್ಯ ಸರ್ಕಾರದವರು ಒಪ್ಪಂದ ಮಾಡಿಕೊಂಡಿರುವರೆ.

(ಆ) ಹಾಗಿದ್ದಲ್ಲಿ ಈ ಒಪ್ಪಂದದ ಮೇರೆಗೆ ಕೇರಳ ರಾಜ್ಯಕ್ಕೆ ಪೂರೈಸಬೇಕಾದ ಸಿಮೆಂಟ್ ಪ್ರಮಾಣ ಅದರ ದರ ಮತ್ತು ಕಾಲಾವಧಿಯ ವಿವರಗಳೇನು.

(ಇ) ರಾಜ್ಯದಲ್ಲಿ ಸಿಮೆಂಟ್ ಬಳಕೆದಾರರಿಗೆ ಯಾವ ದರದಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ.

(ಈ) ಬಹಿರಂಗ ಮಾರುಕಟ್ಟೆಯಲ್ಲಿ ಸರಬರಾಜು ಮಾಡುತ್ತಿರುವ ಸಿಮೆಂಟ್‌ನ್ನು ಸರ್ಕಾರದವರು ಯಾವ ಬೆಲೆಯಲ್ಲಿ ಕೊಳ್ಳುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕ ಮಂತ್ರಿಗಳು).—

(ಅ) ಇಲ್ಲ.

(ಆ) ಅ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

(ಇ) ಭಾರತ ಸರ್ಕಾರದ ನೀತಿಯಂತೆ ಅನಿಯಂತ್ರಿತ ಸಿಮೆಂಟ್‌ನ್ನು ಕಾರ್ಖಾನೆಗಳು ಬಹಿರಂಗ ಮಾರುಕಟ್ಟೆಯಲ್ಲಿ ಯಾವರೀತಿ ಬೆಲೆಯ ಹಾಗೂ ವಿತರಣೆಯ ನಿಯಂತ್ರಣವಿಲ್ಲದೆ ಮಾರುತ್ತಿವೆ. ಸಿಮೆಂಟ್ ಕಾರ್ಖಾನೆಯವರು ಬಹಿರಂಗ ಮಾರುಕಟ್ಟೆಯಲ್ಲಿ ಮಾರುವ ಸಿಮೆಂಟ್ ದರವನ್ನು ಒಂದು ಚೀಲಕ್ಕೆ ೬೮ ರೂ.ಗಳಿಂದ ೭೦ ರೂ.ಗಳವರೆಗೆ (ರೈಲಿನಲ್ಲಿ ಸರಬರಾಜು ಮಾಡಿದರೆ) ನಿಗದಿಪಡಿಸಿದ್ದಾರೆ. ಹಾಗೂ ಲಾರಿಯಲ್ಲಿ ಸಿಮೆಂಟ್‌ನ್ನು ಸರಬರಾಜು ಮಾಡಿದರೆ ಇದರ ಬೆಲೆ ೧ ಚೀಲಕ್ಕೆ ೩ ರೂ.ಗಳಿಂದ ೪ ರೂ.ಗಳವರೆಗೆ ಹೆಚ್ಚಿಗೆ ಆಗುತ್ತದೆ.

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇವರು ಆಮದಾದ ಸಿಮೆಂಟ್‌ನ್ನು ನಿಜ ಬಳಕೆದಾರರಿಗೆ ಒಂದು ಚೀಲಕ್ಕೆ ೫೫ ರೂ.ಗಳಂತೆ (ಸಾರಿಗೆ ವೆಚ್ಚ ಪ್ರತ್ಯೇಕ) ಮಂಗಳೂರು ಬಂದರಿನಲ್ಲಿ ಮಾರುತ್ತಿದ್ದಾರೆ.